ಕರ್ನಾಟಕ ಸರ್ಕಾರ

# ಉಪತಹಶೀಲ್ದಾರರವರ ನ್ಯಾಯಾಲಯ, ನಾಡ ಕಾರ್ಯಾಲಯ

# ಹಂಪಸಾಗರ,

ಸಂ.ಕಂ.ಪಹಣಿ/ವಿವಾದ/48/2015-16 ದಿ. 19.5.2016

---

**ಉಪಸ್ಥಿತರು : ಶ್ರೀ ಎ.ಚಂದ್ರಾನಾಯ್ಕ ಉಪತಹಶೀಲ್ದಾರರು, ನಾಡ ಕಛೇರಿ, ಹಂಪಸಾಗರ**

---

ವಾದಿಗಳು

1) ಶ್ರೀ ಈಶ್ವರಗೌಡ
   ತಂದೆ ಮರೇಗೌಡ
2) ಶ್ರೀ ವಿ.ನಾಗನಗೌಡ
   ತಂದೆ ಮರೇಗೌಡ
3) ಶ್ರೀಮತಿ ಶಾಂತಮ್ಮ
   ಗಂಡ ದಿ॥ ನೀಲಕಂಠಗೌಡ
   ಗ್ರಾಮ : ಬನ್ನಿಕಲ್ಲು.

ಪ್ರತಿವಾದಿಗಳು
ಕಂದಾಯ ನಿರೀಕ್ಷಕರು
ಹಂಪಸಾಗರ

---

ವಿಷಯ : - **ಹಗರಿಬೊಮ್ಮನಹಳ್ಳಿ ತಾಲೂಕು, ಏಣಿಗಿ ಬಸಾಪುರ ಗ್ರಾಮಕ್ಕೆ ಸೇರಿದ ಜಮೀನು ಸ.ನಂ.11ಎ/ಎ/1 ವಿಸ್ತೀರ್ಣ 1-45, 12/ಎ ವಿಸ್ತೀರ್ಣ 3-38 ಜಮೀನುಗಳು ಪವತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ವಿಷಯದಲ್ಲಿ ತಕರಾರು-ವಿಚಾರಣೆ.**

---

**ಪೀಠಿಕೆ :-**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಏಣಿಗಿ ಬಸಾಪುರ ಗ್ರಾಮಕ್ಕೆ ಸೇರಿದ ಜಮೀನುಗಳು ಸ.ನಂ. 11ಎ/ಎ/1 ವಿಸ್ತೀರ್ಣ 1-45 ಹಾಗೂ ಸ.ನಂ 12/ಎ ವಿಸ್ತೀರ್ಣ 3-38 ಎಕರೆ ಜಮೀನುಗಳನ್ನು ಹಾಲೀ ಲೆಕ್ಕದಾಖಲು ಶ್ರೀ ದಿ॥ ಮರೇಗೌಡ ಇವರ ಹೆಸರಿನಲ್ಲಿದ್ದು ಇವರು ದಿನಾಂಕ: 21-07-2004 ರಂದು ಮರಣ ಹೊಂದಿದ್ದು ಇವರ ಮರಣಾ ನಂತರ ಪವತಿ ವಾರಸಾ ಪ್ರಕಾರ ಹಕ್ಕುಬದಲಾವಣೆ ಹೊಂದಲು ವಾದಿಗಳು 1 ರಿಂದ 3 ರವರೆಗಿನ ಅರ್ಜಿದಾರರು ನಿಗದಿತ ನಮೂನೆಯೊಂದಿಗೆ ತಾಲೂಕಾ ಭೂಮಿಕೇಂದ್ರದಲ್ಲಿ ದಾಖಲಾಗಿ ವಹಿವಾಟು ಸಂಖ್ಯೆ 40 ಹಾಗೂ ಹಕ್ಕು ಬದಲಾವಣೆ ಸಂಖ್ಯೆ ಹೆಚ್-22/2015-16 ರ ಪ್ರಕಾರ ಹಕ್ಕು ಬದಲಾವಣೆಗೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಮುಂದಿನ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರಿಗೆ ರವಾನಿಸಲಾಗಿದೆ. ಸದರಿ ನೋಟೀಸುಗಳನ್ನು ಗ್ರಾಮ ಲೆಕ್ಕಾಧಿಕಾರಿ ಏಣಿಗಿ ಬಸಾಪುರ ಇವರು ಪರಿಶೀಲಿಸುತ್ತಾ ಸದರಿ ನಮೂನೆ 12 ಹಾಗೂ ನೋಟೀಸು ನಮೂನೆ 21 ರಲ್ಲಿನ ವಿವರಗಳು ತಪ್ಪಾಗಿರುವುದರಿಂದ ಮತ್ತು ತಂದೆ ಹೆಸರು ತಾಳೆ ಹೊಂದುತ್ತಿಲ್ಲವೆಂದು

ವರದಿ ಮಾಡಿಕೊಂಡಿರುತ್ತಾರೆ. ಗ್ರಾಮ ಲೆಕ್ಕಾಧಿಕಾರಿಗಳ ವರದಿಯನ್ನಾಧರಿಸಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ತಿದ್ದುಪಡಿ ಮಾಡಲು ಸಲ್ಲಿಸಿರುತ್ತಾರೆ.

ದಾಖಲೆಗಳನ್ನು ಪರಿಶೀಲಿಸಲಾಗಿ ನಮೂನೆ 12 ಹಾಗೂ ನೋಟೀಸು ನಮೂನೆ 21 ರಲ್ಲಿನ ಸ.ನಂ. 12/ಎ ವಿಸ್ತೀರ್ಣ 3-38 ರಲ್ಲಿ **ದಿ॥ ಈಶ್ವರಗೌಡ ತಂದೆ ನೀಲಕಂಠಗೌಡ** ಎಂದು ತಪ್ಪಾಗಿ ದಾಖಲಾಗಿರುವುದು ಚೆಲ್‌ಲೀಸ್ಟ್ ಪ್ರಕಾರ ಕಂಡು ಬರುತ್ತದೆ. ಆದ್ದರಿಂದ **ತಂದೆಯ ಹೆಸರು ದಿ॥ ಮರೇಗೌಡ** ಅಂತ ತಿದ್ದುಪಡಿ ಚೆಕ್‌ಲೀಸ್ಟ್ ತೆಗಯಲು ಸೂಚಿಸುತ್ತಾ ಪ್ರಕರಣವನ್ನು ಮುಕ್ತಾಯಗೊಳಿಸುತ್ತಾ ಈ ಕೆಳಕಂಡ

## ಆದೇಶ

ವಹಿವಾಟು ಸಂಖ್ಯೆ 40 ಹಾಗೂ ಹಕ್ಕು ಬದಲಾವಣೆ ಸಂಖ್ಯೆ ಹೆಚರ್-22/2015-16 ರ ಪ್ರಕರಣವನ್ನು ಗೈರು ಮಂಜೂರು ಮಾಡುತ್ತಾ ಮತ್ತು ಹೊಸದಾಗಿ ಚೆಕ್‌ಲೀಸ್ಟ್ ತೆಗೆಯಲು ಆದೇಶಿಸಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಯನ್ನು :-

1) ವಾದಿಗಳು 1 ರಿಂದ 3 ರವರು
2) ತಾಲೂಕು ಭೂಮಿ ಕೇಂದ್ರಕ್ಕೆ
3) ಹೆಚ್ಚುವರಿ ಪ್ರತಿ ಕಡತಕ್ಕೆ